ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) 2002–03ನೇ ಸಾಲಿನ ಕುಳವಾರು ಪಟ್ಟಿ ಸಮೀಕ್ಷೆ ಪ್ರಕಾರ 433 ಲಕ್ಷ.

ಆ) ತೆಂಗಿನ ಮರಗಳ ಆರೋಗ್ಯ ಸುಧಾರಿಸಲು ಮತ್ತು ರೋಗ ನಿರೋಧಕ ಶಕ್ತಿ ವೃದ್ಧಿಸಲು ಸಮಗ್ರ ಬೇಸಾಯ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಅರಿವು ಮೂಡಿಸಲು ರಾಜ್ಯಾದ್ಯಂತ ರೈತರ ತೋಟಗಳಲ್ಲಿ 100 ಬ್ಲಾಕ್ ಪ್ರಾತ್ಯಕ್ಷತೆ ಹಾಗೂ 650 ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರಾರಂಭಿಕವಾಗಿ 12 ಬ್ಲಾಕ್ ಪ್ರಾತ್ಯಕ್ಷತೆಗಳು ಹಾಗೂ 24 ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಉಳಿದ ಬ್ಲಾಕ್ ಪ್ರಾತ್ಯಕ್ಷತೆಗಳನ್ನು ಏರ್ಪಡಿಸಲು ಪೂರ್ವ ಸಿದ್ಧತೆ ಮಾಡಲಾಗುತ್ತಿದೆ.

ಇ) ನುಸಿಯನ್ನು ಸಂಪೂರ್ಣವಾಗಿ ನಿಯಂತ್ರಿಸಲು ಸಾಧ್ಯವಾಗುವುದಿಲ್ಲವೆಂದು ತಜ್ಞರ ಅಭಿಮತವಾಗಿದೆ. ಸ್ವಲ್ಪಮಟ್ಟಿಗೆ ನುಸಿ ಬಾಧೆ ಕಡಿಮೆ ಆಗಿತ್ತು. ಆದರೆ ಬರಗಾಲದ ಪರಿಣಾಮವಾಗಿ ಮತ್ತೆ ನುಸಿಭಾದೆಯಲ್ಲಿ ಹೆಚ್ಚಳವಾಗುತ್ತಿರುವುದು ಕಂಡುಬಂದಿದೆ. ನುಸಿ ನಿರ್ವಹಣೆಗಾಗಿ 1999–2000 ದಿಂದ 2002–03ರ ವರೆಗೆ ರೂ. 1412.61 ಲಕ್ಷಗಳನ್ನು ಬಳಕೆ ಮಾಡಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೊಸ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸುವುದು

3213 (3661) ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳಿವೆ: ಈಗ ಅನೇಕ ಗ್ರಾಮಗಳಿಗೆ ಇವುಗಳ ಅವಶ್ಯಕತೆ ಇದ್ದು ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಪ್ರಾರಂಭಿಸಲು ಕ್ರಮ ಕೈಗೊಳ್ಳುವಿರಾ:

ಆ) ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೀರಾ ಸಲ್ಲಿಸಿದ್ದಲ್ಲಿ, ಯಾವ ಹಂತದಲ್ಲಿದೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) 1526 ಅಂಗನವಾಡಿ ಕೇಂದ್ರಗಳು

ಇಲ್ಲ

ಆ) 28.02.02ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸಂಪನ್ಮೂಲ ಕೊರತೆಯಿಂದ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ಸಧ್ಯಕ್ಕೆ ಮಂಜೂರು ಮಾಡಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 2–1/200–ಸಿಡಿ–1, ದಿನಾಂಕ: 16.09.02 ರಲ್ಲಿ ತಿಳಿಸಿರುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ತ್ರೀಶಕ್ತಿ ಗುಂಪುಗಳಿಗೆ ಬಿಡುಗಡೆಯಾದ ಹಣ

3214 (3662) ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಸ್ತ್ರೀಶಕ್ತಿ ಸಂಘಗಳಿವೆ?

ಆ) ಇದರ ಯೋಜನೆಯಲ್ಲಿ ಆ ಸಂಘಗಳಿಗೆ ಬಿಡುಗಡೆಯಾದ ಹಣದ ವಿವರ, ತಾಲ್ಲೂಕುವಾರು ಪ್ರತ್ಯೇಕ ಸಂಘಗಳವಾರು ವರದಿ ನೀಡುವುದು

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 1285 ಸ್ತ್ರೀಶಕ್ತಿ ಗುಂಪುಗಳಿವೆ.

ಆ) ಸ್ತ್ರೀಶಕ್ತಿ ಯೋಜನೆಯಡಿ ಬಿಡುಗಡೆಯಾಗಿರುವ ಹಣ, ಕಾರ್ಯಕ್ರಮಗಳ ವಿವರಗಳನ್ನು

ಅನುಬಂಧ – 1

ಚಿಕ್ಕಮಗಳೂರು ಜಿಲ್ಲೆಯ 7 ತಾಲ್ಲೂಕುಗಳಲ್ಲಿನ ಸ್ತ್ರೀಶಕ್ತಿ ಗುಂಪಿಗೆ ವಿವಿಧ ಚಟುವಟಿಕೆಯೂ ಬಿಡುಗಡೆಯಾಗಿರುವ ಅನುದಾನದ ವಿವರ

(ಲಕ್ಷಗಳಲ್ಲಿ)

ಕ್ರ.ಸಂ.	ತಾಲ್ಲೂಕುಗಳು	ರಚನೆಯಾಗಿರುವ	ಇಲಾಖೆಯಿಂದ	ಎಸ್.ಜಿ.ಎಸ್.ವೈ	ಗುಂಪುಗಳಿಗೆ	ಅಂಗನವಾಡಿ	ಅಂ.ಕಾ. ಕರ್ತೆ	ಷರಾ
1	2	3	4	5	6	7	8	9
1.	ಚಿಕ್ಕಮಗಳೂರು	369	24.35	1.30	2.53	2.75	2.97	1. ಪ್ರತಿ ಗುಂಪಿಗೆ ತಲಾ ರೂ. 5000–00 ಸುತ್ತುನಿಧಿ ನೀಡಲಾಗುತ್ತದೆ.
2.	ಕಡೂರು	182	16.80	2.00	1.25	1.80	2.38	
3.	ತರೀಕೆರೆ	330	13.85	5.30	2.26	2.52	2.26	
4.	ಕೊಪ್ಪ	100	4.60	0.80	0.69	0.75	0.62	
5.	ಶೃಂಗೇರಿ	92	3.40	2.40	0.63	0.76	1.09	2. ಪ್ರತಿ ಗುಂಪಿಗೆ ರಿಜಿಸ್ಟರ್:ಟ್ರಂಕ್ ಖರೀದಿಸಲು ತಲಾ ರೂ. 500–00ರಂತೆ ಕಿಟ್ ಮೆಟೆರಿಯಲ್ಸ್ ನೀಡಲಾಗುತ್ತಿದೆ.
6.	ನರಸಿಂಹರಾಜಪುರ	78	2.95	1.90	0.54	0.63	1.02	
7.	ಮೂಡಿಗೆರೆ	134	5.40	0.60	0.92	1.13	1.34	
	ಒಟ್ಟು	**1285**	**71.35**	**14.30**	**8.82**	**10.34**	**11.68**	